**ಓ ಎಸ್ 9/2021 ಪಿಡಬ್ಲ್ಯೂ1**

**ಸಾಕ್ಷಿಯನ್ನು ದಿಃ 21.07.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ಶ್ರೀ ಎನ್ ಎಂ ಜಿ ವಕೀಲರಿಂದಃ**

ನಾನು ನನ್ನ ತಂದೆಗೆ 2 ನೇ ಮಗಳು ಎಂದರೆ ಸರಿ. ನಾನು 6 ನೇ ತರಗತಿಯವರೆಗೆ ಓದಿದ್ದೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ಜನ್ಮ ದಿನಾಂಕ 08.03.1984 ಆಗಿರುತ್ತದೆ.

6 ನೇ ಪ್ರತಿವಾದಿಯು ನನ್ನ ಚಿಕ್ಕಪ್ಪ. ಈ ದಾವೆ ಹೂಡುವ ಮೊದಲು ದಿನಾಂಕ 20.06.2020 ರಂದು 6 ನೇ ಪ್ರತಿವಾದಿಯು ನನ್ನ ತಂದೆ ಮತ್ತು ಇತರರಿಗೆ ನೋಟೀಸು ನೀಡಿದ್ದರು ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆಯು ಸದರಿ ನೋಟೀಸು ಆಗಿದೆ. ಸಾಕ್ಷಿಯು ದಾಖಲೆಯನ್ನು ಒಪ್ಪಿದ್ದರಿಂದ ಅದನ್ನು ನಿಶಾನೆ ಡಿ 2 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಅಂಚೆ ಸ್ವೀಕೃತಿಯು ಸದರಿ ನೋಟೀಸನ್ನು ನನ್ನ ತಂದೆ ಪಡೆದಿರುವುದಕ್ಕೆ ಸಂಬಂಧಿಸಿದ್ದಾಗಿದೆ. ಸಾಕ್ಷಿಯು ಒಪ್ಪಿದ್ದರಿಂದ ಅದನ್ನು ನಿಶಾನೆ ಡಿ 3 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆಯು ನನ್ನ ತಂದೆಯು ನೀಡಿರುವ ಪ್ರತ್ಯುತ್ತರ ಆಗಿದೆ. ಸಾಕ್ಷಿಯು ಒಪ್ಪಿದ್ದರಿಂದ ಅದನ್ನು ನಿಶಾನೆ ಡಿ 4 ಎಂದು ಗುರುತಿಸಲಾಯಿತು. ಸದರಿ ನೋಟೀಸಿನ ಸಂಗತಿಗಳನ್ನು ನನ್ನ ತಂದೆ ನನ್ನೊಂದಿಗೆ ಚರ್ಚಿಸಿದ್ದಾರೆ. ನಾನು ಹುಟ್ಟಿದ 6 ತಿಂಗಳ ಒಳಗೆ ಅಂದರೆ ದಿನಾಂಕ 17.09.1984 ರಂದು ಪಂಚಾಯಿತಿ ಪಾಲುಪಟ್ಟಿಯ ಮೇರೆಗೆ ಪಿತ್ರಾರ್ಜಿತ ಹಾಗೂ ಸ್ವಯಾರ್ಜಿತ ಸ್ವತ್ತುಗಳು ವಿಭಜನೆಯಾಗಿವೆ ಎಂದು ಸದರಿ ನೋಟೀಸಿನಲ್ಲಿ ತಿಳಿಸಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಅಂತಹ ಯಾವುದೇ ಪಂಚಾಯಿತಿ ಪಾಲು ಪಟ್ಟಿ ವಿಭಾಗ ಆಗದೆ ಇದ್ದರೂ ಸಹ 6 ನೇ ಪ್ರತಿವಾದಿಯು ಸುಳ್ಳು ಹೇಳಿದ್ದಾರೆ ಎಂದು ಹೇಳುತ್ತಾರೆ. ನಮ್ಮ ತಂದೆಗೆ ಆಸ್ತಿಗಳು

ಮೌಖಿಕ ವಿಭಾಗದ ಮೂಲಕ ಬಂದಿದೆ. ನಮ್ಮ ತಾತ ಕರಿಯಪ್ಪ ಹಾಗೂ ಮತ್ತು ಅಜ್ಜಿ ಸಣ್ಣಮ್ಮ ಬದುಕಿದ್ದಾಗಲೇ ತಮ್ಮ 3 ಜನ ಮಕ್ಕಳಿಗೆ ಮೌಖಿಕವಾಗಿ ವಿಭಾಗ ಮಾಡಿಕೊಟ್ಟಿದ್ದಾರೆ. ಅಂತಹ ಯಾವುದೇ ಮೌಖಿಕ ವಿಭಾಗ ಆಗಿರದೆ ವಿಭಾಗವು ದಿನಾಂಕ 17.09.1984 ರ ಪಂಚಾಯಿತಿ ಪಾಲುಪಟ್ಟಿಯ ಮೂಲಕ ಆಗಿದೆ ಎಂದರೆ ಸರಿಯಲ್ಲ. ಮೌಖಿಕ ವಿಭಾಗವು ತಾಲ್ಲೋಕು ಕಚೇರಿಯಲ್ಲಿ ನಡೆದಿದೆ. ನಮ್ಮ ದೊಡ್ಡಪ್ಪ ಮೃತ ಸಿ.ಕೆ. ದೇವೇಗೌಡರು ಮುಂದೆ ನಿಂತು ಮೌಖಿಕ ವಿಭಾಗ ಮಾಡಿ ಅದರ ಅನುಸಾರ ತಾಲ್ಲೋಕು ಕಚೇರಿಯಲ್ಲಿ ಕಂದಾಯ ದಾಖಲೆಗಳನ್ನು ಎಲ್ಲರ ಹೆಸರಿಗೆ ಬದಲಾವಣೆ ಮಾಡಿಸಿಕೊಟ್ಟಿದ್ದಾರೆ. ಈಗ ನನಗೆ ತೋರಿಸಿದ ದಾಖಲೆಯಲ್ಲಿನ ಸಹಿಯು ನನ್ನ ದೊಡ್ಡಪ್ಪ ಮೃತ ಸಿ.ಕೆ. ದೇವೇಗೌಡರದಾಗಿದೆ. (ಸದರಿ ದಾಖಲೆಯು ನೆರಳಚ್ಚಿನ ಪ್ರತಿಯಾಗಿದ್ದು ಅದರ ಮೂಲ ದಸ್ತಾವೇಜು ತಂದೆಯ ಬಳಿ ಇರುವುದಾಗಿ ಸದರಿ ದಾಖಲೆಯಲ್ಲಿ ನಮೂದು ಆಗಿದೆ. ಈ ಹಿನ್ನಲೆಯಲ್ಲಿ 6 ನೇ ಪ್ರತಿವಾದಿಯು ವಾದಿಗೆ ಸಿಪಿಸಿ ಕ್ರಮಾದೇಶ 12 ನಿಯಮ 13 ಸಹ ವಾಚಕ 151 ರಡಿ ನೋಟೀಸನ್ನು ದಿನಾಂಕ 13.10.2022 ರಂದು ನೀಡಿದ್ದು ಆ ನೋಟೀಸಿಗೆ ವಾದಿಯು ದಿನಾಂಕ 21.11.2022 ಆಕ್ಷೇಪಣೆಯನ್ನು ಸಹ ಸಲ್ಲಿಸಿ ಅಂತಹ ಯಾವುದೇ ಪಂಚಾಯಿತಿ ಪಾಲುಪಟ್ಟಿ ಇಲ್ಲ ಎಂದು ಹೇಳಿರುವುದು ಕಂಡು ಬರುತ್ತದೆ. ಮೂಲ ದಾಖಲೆಯನ್ನು ಹಾಜರುಪಡಿಸಲು ನೋಟೀಸು ನೀಡಿರುವ ಕಾರಣ ಮತ್ತು ಆ ನೋಟೀಸಿಗೆ ಆಕ್ಷೇಪಣೆ ಸಲ್ಲಿಸಿರುವ ಕಾರಣ ನೆರಳಚ್ಚಿನ ಪ್ರತಿಯನ್ನು ನಿಶಾನಿಸಿಕೊಳ್ಳಲು ಅನುಮತಿಸಲಾಗಿದೆ.) ದಾಖಲೆಯನ್ನು ನಿಶಾನೆ ಡಿ 5 ಎಂದು, ಸಹಿಯನ್ನು ನಿಶಾನೆ ಡಿ 5(ಎ) ಎಂದು ಗುರುತಿಸಲಾಯಿತು.

ನನ್ನ ತಂದೆ ಹೆಬ್ಬೆಟ್ಟಿನ ಗುರುತನ್ನು ಮಾತ್ರ ಹಾಕುತ್ತಾರೆ ಎಂದರೆ ಸರಿಯಲ್ಲ, ಸಹಿ ಮಾಡುತ್ತಾರೆ. ನಮ್ಮ ತಂದೆ ಯಾವುದೇ ಶಾಲೆಗೆ ಹೋಗಿಲ್ಲ ಮತ್ತು ವಿದ್ಯಾಭ್ಯಾಸ ಮಾಡಿಲ್ಲವಾದ ಕಾರಣ ಅವರು ಇತ್ತೀಚೆಗೆ ಸಹಿ ಮಾಡುವುದನ್ನು ಕಲಿತುಕೊಂಡಿದ್ದಾರೆ

ಎಂದರೆ ಸರಿಯಲ್ಲ, ನನ್ನ ತಂದೆ ಮೊದಲಿನಿಂದಲೂ ಸಹಿ ಮಾಡುತ್ತಾರೆ. ಈಗ ನನಗೆ ತೋರಿಸಿದ ಸಹಿಯು ನನ್ನ ಚಿಕ್ಕಪ್ಪ 6 ನೇ ಪ್ರತಿವಾದಿ ನಾಗರಾಜೇಗೌಡರದು ಎಂದರೆ ಸರಿ. ಸಾಕ್ಷಿಯು ಸಹಿಯನ್ನು ಗುರುತಿಸಿದ್ದರಿಂದ ಅದನ್ನು ನಿಶಾನೆ ಡಿ 5 ಬಿ ಎಂದು ಗುರುತಿಸಲಾಯಿತು.

ನನ್ನ ಅಜ್ಜಿ, ನನ್ನ ತಾತ ಮತ್ತು ನನ್ನ ತಂದೆ ಮೂರು ಜನ ಹೆಬ್ಬೆಟ್ಟು ಗುರುತನ್ನು ಮಾತ್ರ ಹಾಕುತ್ತಿದ್ದರು ಎಂದರೆ, ನನ್ನ ಅಜ್ಜಿ ಮತ್ತು ತಾತ ಹೆಬ್ಬೆಟ್ಟು ಗುರುತನ್ನು ಹಾಕುತ್ತಿದ್ದು ನನ್ನ ತಂದೆ ಸಹಿ ಮಾಡುತ್ತಿದ್ದರು. ನನ್ನ ಅಜ್ಜಿ ಮತ್ತು ತಾತ ವ್ಯಾಪಾರದ ಉದ್ದೇಶದಿಂದ ಚಂದ್ರೆ ಗ್ರಾಮದಿಂದ ಪಾಂಡವಪುರಕ್ಕೆ ಬಂದು ಸೇರಿಕೊಂಡರು ಎಂದರೆ ಸರಿ. ಅವರ ಜೊತೆಯಲ್ಲಿ ಅವರ ಹಿರಿಯ ಮಗ ಸಿ ಕೆ ದೇವೇಗೌಡ ಹಾಗೂ ಕಿರಿಯ ಮಗ ನಾಗರಾಜೇಗೌಡ ಸಹ ಬಂದು ಸೇರಿಕೊಂಡರು ಎಂದರೆ ಸರಿ. ನನ್ನ ತಂದೆ ತಮ್ಮ ಪೂರ್ವಜರ ಸ್ವತ್ತು ಇದ್ದ ಚಂದ್ರೆ ಗ್ರಾಮದಲ್ಲಿಯೇ ವಾಸವಿದ್ದರು ಎಂದರೆ ಸರಿ.

ಪಾಂಡವಪುರಕ್ಕೆ ಬಂದ ನಂತರ ನನ್ನ ಅಜ್ಜಿ, ತಾತ, ದೊಡ್ಡಪ್ಪ ಮತ್ತು ಚಿಕ್ಕಪ್ಪನವರು ಬೆಲ್ಲ ಮತ್ತು ಇತರೆ ವ್ಯಾಪಾರ ಮಾಡಿ ಸಾಕಷ್ಟು ಆಸ್ತಿಗಳನ್ನು ಸಂಪಾದಿಸಿದ್ದರು ಎಂದರೆ, ಪಾಂಡವಪುರದಲ್ಲಿ ಮತ್ತು ಚಂದ್ರೆ ಗ್ರಾಮ ಎರಡು ಕಡೆ ಸಂಪಾದನೆ ಮಾಡಿದ್ದಾರೆ.

ಚಂದ್ರೆ ಗ್ರಾಮದಲ್ಲಿದ್ದ ನಮ್ಮ ಪೂರ್ವಜರ ಸ್ವತ್ತುಗಳನ್ನು ಸರ್ವೆ ನಂಬರುಗಳ ಬದಲಾಗಿ ಹೆಸರುಗಳಿಂದ ಗುರುತಿಸುತ್ತಿದ್ದರು ಎಂದರೆ ಸರಿಯಲ್ಲ. ಆ ಜಮೀನುಗಳನ್ನು ಸಣ್ಣೇಗೌಡನ ಹೊಲ, ವಡ್ಡರಹಳ್ಳಿ ಬಾರೇ ಹೊಲ, ಕಣದ ಹೊಲ, ಅಡಿಕೆ ತೋಟ ಈ ರೀತಿ ಹೆಸರುಗಳಿಂದ ಗುರುತಿಸುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ದೊಡ್ಡಪ್ಪ ಮತ್ತು ಚಿಕ್ಕಪ್ಪನವರು ವ್ಯಾಪಾರದ ಹಣದಿಂದ ತಮ್ಮ ಹೆಸರುಗಳಲ್ಲಿ ಆಸ್ತಿ ಖರೀದಿಸಿದ್ದಾರೆ ಎಂದರೆ ನನ್ನ ತಂದೆ ತಕರಾರು ತೆಗೆದರು ಎಂದರೆ ಸರಿಯಲ್ಲ. ನನ್ನ

ತಂದೆ ಈ ರೀತಿ ತಕರಾರು ತೆಗೆದ ಕಾರಣ ನನ್ನ ತಾತನವರು ತಮ್ಮ ಹೆಸರಿನಲ್ಲಿ, ನನ್ನ ದೊಡ್ಡಪ್ಪ ಮತ್ತು ಚಿಕ್ಕಪ್ಪನವರ ಹೆಸರಿನಲ್ಲಿ ಖರೀದಿಸಿದ ಆಸ್ತಿಗಳು ಹಾಗೂ ಪೂರ್ವಾಜಿತ ಆಸ್ತಿಗಳನ್ನು ಸೇರಿಸಿ ದಿನಾಂಕ 17.09.1984 ರ ಪಂಚಾಯಿತಿ ಪಾಲುಪಟ್ಟಿ ಮೂಲಕ ಎಲ್ಲರಿಗೂ  ವಿಭಾಗ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ವಿಭಾಗದಲ್ಲಿ ಚಂದ್ರೆ ಗ್ರಾಮದ ಮನೆಯೂ ಸೇರಿದಂತೆ ನಮ್ಮ ತಂದೆಗೆ ಹೆಚ್ಚಿನ ಪಾಲು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ದಿನಾಂಕ 15.11.2010 ರಂದು ನಮ್ಮ ತಂದೆ ಮತ್ತು ನಾವುಗಳು ಮಕ್ಕಳುಗಳು  ಸೇರಿ ರಾಮೇಗೌಡರ ಹೆಂಡತಿ ರಾಜಮ್ಮ ಎಂಬುವವರಿಗೆ ಚಂದ್ರೆ ಗ್ರಾಮದ ಸರ್ವೆ ನಂ. 76/1 ರಲ್ಲಿ 1 ಎಕರೆ 0.23 ಗುಂಟೆ ಜಮೀನನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿ.

ದಿನಾಂಕ 15.02.2001 ರಂದು ಚಂದ್ರೆ ಗ್ರಾಮದ ಹಳೆಯ ಮನೆಯನ್ನು ನಮ್ಮ ತಂದೆ ಮತ್ತು ತಾಯಿ  ಮಂಜುನಾಥ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ.

ದಿನಾಂಕ 14.08.1986 ರಂದು ನನ್ನ ದೊಡ್ಡಪ್ಪ ಸಿ ಕೆ ದೇವೇಗೌಡ, ನನ್ನ ತಂದೆ ಸಿ ಕೆ ವೆಂಕಟೇಶ ಹಾಗೂ ನನ್ನ ಚಿಕ್ಕಪ್ಪ ಕೆ ನಾಗರಾಜುರವರುಗಳು "ಎ" ಪಾರ್ಟಿಗಳಾಗಿ, ಪಾಂಡವಪುರದ ಹಿರೋಡೆ ಬೀದಿಯ ಲೇಟ್ ಪೈಲಾನ್ ಸಿದ್ದೇಗೌಡರ  ಮಕ್ಕಳಾದ ಎಸ್ ಲಿಂಗರಾಜು, ಪಿ ಎಸ್ ಉಮಾಶಂಕರ್ ಮತ್ತು ಎಸ್ ಜಗದೀಶ್ ರವರುಗಳು "ಬಿ" ಪಾರ್ಟಿಗಳಾಗಿ,  ಪಾಂಡವಪುರ ಗ್ರಾಮದ ಸರ್ವೆ ನಂ. 75/ಬಿ ರಲ್ಲಿ 0.20 ಗುಂಟೆ ಜಮೀನು ಹಾಗೂ ಸರ್ವೆ ನಂ. 35/3 ಎ ವಿಸ್ತೀರ್ಣ 0.35 ಗುಂಟೆ ಜಮೀನು ಮತ್ತು ಸರ್ವೆ ನಂ. 35/3 ಬಿ ವಿಸ್ತೀರ್ಣ 0.05 ಗುಂಟೆ ಜಮೀನು ವರ್ಗಾವರ್ಗಿ ಮಾಡಿಕೊಂಡಿದ್ದಾರೆ ಎಂದರೆ ಇರಬಹುದು, ನನಗೆ ಅಷ್ಟಾಗಿ ಗೊತ್ತಿಲ್ಲ. ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿಯು ನನ್ನ

ತಂದೆಯದಾಗಿದೆ. (ಸದರಿ ದಾಖಲೆಯು ದಿನಾಕ 08.09.2005 ರ ರಿಲೀಸ್ ಯಾ ಹಕ್ಕು ಖುಲಾಸೆ ಪತ್ರದ ನೆರಳಚ್ಚಿನ ಪ್ರತಿಯಾಗಿರುವುದರಿಂದ ಅದನ್ನು ಸಾಕ್ಷ್ಯ ಅಧಿನಿಯಮದ ಉಪಬಂಧಗಳನ್ನು ಅನುಪಾಲನೆ ಮಾಡದೆ ಹಾಜರುಪಡಿಸಿರುವ ಕಾರಣ ನಿಶಾನಿಸಲು ನಿರಾಕರಿಸಲಾಯಿತು.) ಸದರಿ ಹಕ್ಕು ಬಿಡುಗಡೆ ಪತ್ರದ ಮೂಲಕ ನೀಡಿರುವ ಸ್ವತ್ತಿನಲ್ಲಿ ರಿಲೆಯನ್ಸ್ ಪೆಟ್ರೋಲ್ ಬಂಕ್‌ನ್ನು ನಡೆಸಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿ. ಆ ಸ್ವತ್ತನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಪಾಂಡವಪುರದ ಹಿರೋಡೆ ಗ್ರಾಮದಲ್ಲಿರುವ ಮನೆಯನ್ನು ಸಹ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

ದಾವಾ ಷೆಡ್ಯೂಲ್ ಐಟಂ ನಂ. 1 ಮತ್ತು 4 ನನ್ನ ಅಜ್ಜಿ ಸಣ್ಣಮ್ಮರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ ನಂ. 2 ನನ್ನ ತಾತ ಚಂದ್ರೆ ಕರಿಯಪ್ಪನವರ ಸ್ವಯಾರ್ಜಿತ ಎಂದರೆ ಸರಿಯಲ್ಲ, ಆ ಆಸ್ತಿಯನ್ನು ನನ್ನ ಅಜ್ಜಿ ಖರೀದಿಸಿಕೊಂಡಿದ್ದರು.

ಈ ದಾವೆ ಹೂಡುವ ಮೊದಲು ದಾವಾ ಆಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನೋಡಿ ತಿಳಿದುಕೊಂಡಿದ್ದೇನೆ. ಸರ್ವೆ ನಂ. 72/1 ಎ ರಲ್ಲಿನ 0.06 ಗುಂಟೆ ಜಮೀನು ಮತ್ತು ಹಿರೋಡೆ ಗ್ರಾಮದ ಆರ್ ಸಿ ಸಿ ಮನೆಯ ಎದುರು ಭಾಗದಲ್ಲಿ ಇರುವ ಹಳೆಯ ಮನೆ ನಮ್ಮ ತಂದೆಗೆ ಸೇರತಕ್ಕದ್ದು ಎಂದು ದಿನಾಂಕ 17.09.1984 ರ ಪಂಚಾಯಿತಿ ಪಾಲುಪಟ್ಟಿಯಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ಸದರಿ 0.06 ಗುಂಟೆ ಜಮೀನು ಒಳಚರಂಡಿಗೆ ಭೂಸ್ವಾಧೀನಗೊಂಡಿದೆ ಎಂದರೆ ಸರಿ 0.06 ಗುಂಟೆ ಜಮೀನು ಸೇರಿ ನಮ್ಮ ಅಜ್ಜ ಮತ್ತು ಅಜ್ಜಿಗೆ ಬಿಟ್ಟುಕೊಂಡಿದ್ದ ಎಲ್ಲಾ ಅಜ್ಜಪಾಲು ಜಮೀನು ಸಹ ಒಳಚರಂಡಿ ಯೋಜನೆಗೆ ಭೂಸ್ವಾಧೀನವಾಗಿದೆ. ಹಾಗೆ ಒಳಚರಂಡಿಗೆ ಭೂ ಸ್ವಾಧೀನ ಮಾಡಿಕೊಂಡ ಕಾಲದಲ್ಲಿ ನಮ್ಮ ಅಜ್ಜಿ ಜೀವಂತ ಇದ್ದರು ಎಂದರೆ ಸರಿ. ಆದ್ದರಿಂದ ಪರಿಹಾರದ ನಡಾವಳಿಗಳು

ನನ್ನ ಅಜ್ಜಿಯ ಹೆಸರಿನಲ್ಲಿಯೇ ನಡೆದುಕೊಂಡು ಬಂದಿವೆ ಎಂದರೆ ಸರಿ.

ನನ್ನ ಅಜ್ಜಿ ಮತ್ತು ಅಜ್ಜನವರು ಇಟ್ಟುಕೊಂಡಿದ್ದ ಅಜ್ಜಪಾಲಿನ ಸ್ವತ್ತುಗಳು ಅವರ ಮರಣಾ ನಂತರ ಯಾವ ರೀತಿ ವಿಲೇ ಆಗಬೇಕು ಎಂದು ಸದರಿ ಪಂಚಾಯಿತಿ ಪಾಲುಪಟ್ಟಿಯಲ್ಲಿ ಬರೆದುಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಅಜ್ಜಿ ಮತ್ತು ತಾತ ತೀರಿಕೊಂಡ ನಂತರ ಈ ಮೇಲೆ ಹೇಳಿದ 0.06 ಗುಂಟೆ ಜಮೀನನ್ನು ನನ್ನ ತಂದೆಯ ಪಾಲಿಗೆ ಸೇರಬೇಕು ಎಂದು ಸದರಿ ಪಂಚಾಯಿತಿ ಪಾಲುಪಟ್ಟಿಯಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ಇನ್ನುಳಿದ ಸರ್ವೆ ನಂ. 75 ರಲ್ಲಿನ 1 ಎಕರೆ 0.01 ಗುಂಟೆ, ಮತ್ತು ಸರ್ವೆ ನಂ. 72 ರಲ್ಲಿ 0.32 ಗುಂಟೆ ನನ್ನ ದೊಡ್ಡಪ್ಪ ಸಿ ಕೆ ದೇವೇಗೌಡ ನನ್ನ ಚಿಕ್ಕಪ್ಪ ನಾಗರಾಜೇಗೌಡರಿಗೆ ಸಮನಾಗಿ ಸೇರತಕ್ಕದ್ದು ಎಂದು ಸದರಿ ಪಾಲುಪಟ್ಟಿಯಲ್ಲಿ ಬರವಣಿಗೆಯಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು 3 ಜನರಿಗೂ ಸೇರಬೇಕಾಗಿದೆ ಎಂದು ಹೇಳುತ್ತಾರೆ. ಹಾಗೆ ಹೇಳಲು ನನ್ನ ಬಳಿ ದಾಖಲೆಗಳು ಇವೆ. ಸಂಬಂಧಿಸಿದ ದಾಖಲೆಗಳನ್ನು ನಾನು ನನ್ನ ವಕೀಲರಿಗೆ ನೀಡಿದ್ದೇನೆ.

**ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**